**PCR No**.74/2026

**PW**–1

ದಿಃ **18-06-2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

## ಪಿರ್ಯಾದಿಯ ಪ್ರತಿಜ್ಞಾ ಪೂರ್ವಕ ಹೇಳಿಕೆ

ನಾನು ನನ್ನ ಪ್ರತಿಜ್ಞಾಪೂರ್ವಕ ಹೇಳಿಕೆಯ ಸಲುವಾಗಿ ಈ ದಿನ ನನ್ನ ಪ್ರಮಾಣ ಪತ್ರ ಸಲ್ಲಿಸುತ್ತಿದ್ದು ಅದರಲ್ಲಿ ಹೇಳಿರುವ ಅಂಶಗಳೆಲ್ಲಾ ಸತ್ಯವಾಗಿರುತ್ತದೆ ಹಾಗೂ ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

1. ಆರೋಪಿಯು ನನಗೆ **SBI** ಬ್ಯಾಂಕ ನ ದಿಃ 01.01.2026 ರ ಒಂದು ಚೆಕ್ ನ್ನು ನೀಡಿದ್ದು, ಅಸಲು ಪ್ರತಿಯನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ–1 ಎಂದು, ಅದರಲ್ಲಿರುವ ಆರೋಪಿಯ ಸಹಿಯನ್ನು ನಿಪಿ–1 (ಎ) ಎಂದು,
2. **SBI** ಬ್ಯಾಂಕ್ ನವರು ನೀಡಿದ ಹಿಂಬರವನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ–2 ಎಂದು,
3. ದಿಃ 24.01.2026 ರಂದು ವಕೀಲರ ಮೂಲಕ ಆರೋಪಿಗೆ ನೀಡಿದ ನೋಟೀಸಿನ ಕಛೇರಿಯ ಪ್ರತಿಯನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ–3 ಎಂದು,
4. ಅಂಚೆ ರಶೀದಿಯನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ–4 ಎಂದು,
5. ಆರೋಪಿಗೆ ಕಳುಹಿಸಿದ refused ಎಂಬ ಹಿಂಬರಹದೊಂದಿಗೆ ವಾಪಸಾದ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದನ್ನು ನಿಪಿ–5 ಎಂದು, ಅದರಲ್ಲಿರುವ ನೊಟೀಸ ಪ್ರತಿಯನ್ನು ನಿಪಿ–5(ಎ) ಎಂದು ಗುರುತಿಸಲಾಯಿತು.

ಆದ್ದರಿಂದ ಆರೋಪಿಯ ವಿರುದ್ಧ ಸಂಜ್ಞೇಯತೆಯನ್ನು ತೆಗೆದುಕೊಂಡು ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ಪ್ರಾರ್ಥಿಸುತ್ತೇನೆ.

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.

ಮೂಡಲಗಿ.